# ಸಿಎನ್‌ಎಲ್ ವಿಭಾಗದ ಕಾರ್ಯ ಚಟುವಟಿಕೆಯ ಬಗ್ಗೆ

## I. ನಾಗರೀಕ ನೋಂದಣಿ ಪದ್ಧತಿ :

ಜನನ ಮರಣ ನೋಂದಣಿ ಅಧಿನಿಯಮ, 1969 ವು 1ನೇ ಏಪ್ರಿಲ್ 1970 ರಿಂದ ರಾಜ್ಯದಲ್ಲಿ ಜಾರಿಗೆ ಬಂದಿರುತ್ತದೆ. ಕರ್ನಾಟಕ ಜನನ ಮರಣ ನೋಂದಣಿ ನಿಯಮಗಳು 1970ನ್ನು ರಚಿಸಿ, ಕರ್ನಾಟಕ ರಾಜ್ಯ ಸರ್ಕಾರವು 15ನೇ ಡಿಸೆಂಬರ್ 1970ರಂದು ಅಧಿಸೂಚಿಸಿದ್ದು, ಅದನ್ನು 1ನೇ ಜನವರಿ 1971 ರಿಂದ ಜಾರಿಗೆ ತರಲಾಗಿದೆ. ತದನಂತರ ಭಾರತದ ಮಹಾ ನೋಂದಣಾಧಿಕಾರಿಗಳ ಸೂಚನೆಯಂತೆ ಕರ್ನಾಟಕ ಜನನ ಮರಣ ನೋಂದಣಿ ನಿಯಮಗಳನ್ನು ಡಿಸೆಂಬರ್ 1999ರಲ್ಲಿ ತಿದ್ದುಪಡಿ ಮಾಡಲಾಗಿರುತ್ತದೆ. ಪುನರ್ ರಚಿತ ಜನನ ಮರಣ ನೋಂದಣಿ ಪದ್ಧತಿಯನ್ನು 1ನೇ ಜನವರಿ 2000 ರಿಂದ ಕರ್ನಾಟಕದಲ್ಲಿ ಜಾರಿಗೆ ತರಲಾಗಿದೆ.

1. **ವೆಬ್-ಆಧಾರಿತ ಜನನ ಮತ್ತು ಮರಣ ನೋಂದಣಿ ಇ-ಜನ್ಮ :**

   ಜನನ ಮರಣ ನೋಂದಣಿ ಪದ್ಧತಿಯನ್ನು ಸರಳೀಕರಣಗೊಳಿಸುವ ಉದ್ದೇಶದಿಂದ, ಜನನ ಮರಣ ಮತ್ತು ನಿರ್ಜೀವ ಜನನ ಘಟನೆಗಳನ್ನು ನೋಂದಣಿ ಮಾಡಲು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ಎನ್‌ಐಸಿಯ ಸಹಯೋಗದೊಂದಿಗೆ ವೆಬ್-ಆಧಾರಿತ ತಂತ್ರಾಂಶವನ್ನು ಅಭಿವೃದ್ಧಿಪಡಿಸಿದ್ದು, ತಂತ್ರಾಂಶವನ್ನು ಇ-ಜನ್ಮ (ಅಂದರೆ Electronic Janana Marana) ಎಂದು ಹೆಸರಿಸಲಾಗಿದೆ. ಕರ್ನಾಟಕದಲ್ಲಿ ಇ-ಜನ್ಮ ತಂತ್ರಾಂಶವನ್ನು ಗ್ರಾಮೀಣ ಪ್ರದೇಶದಲ್ಲಿ 1ನೇ ಆಗಸ್ಟ್ 2014 ರಿಂದ ಹಂತ ಹಂತವಾಗಿ ಅನುಷ್ಠಾನಗೊಳಿಸಲಾಗಿರುತ್ತದೆ. ತದನಂತರ, ದಿನಾಂಕ: 01.04.2018 ರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಮತ್ತು 02.07.2018 ರಿಂದ ನಗರ ಸ್ಥಳೀಯ ಸಂಸ್ಥೆಗಳಲ್ಲಿ rolled out ಮಾಡಲಾಗಿರುತ್ತದೆ.

   ಜನನ ಮರಣ ಪ್ರಮಾಣ ಪತ್ರಗಳನ್ನು ನೋಂದಣಾಧಿಕಾರಿಗಳು ಡಿಜಿಟಲ್ ಸಹಿಯೊಂದಿಗೆ ನೀಡುರುತ್ತಾರೆ. ಗ್ರಾಮೀಣ ಪ್ರದೇಶ ವ್ಯಾಪ್ತಿಯಲ್ಲಿ ಘಟಿಸುವ ಜನನ ಮರಣ ಘಟನೆಗಳಿಗೆ ಪ್ರಮಾಣ ಪತ್ರಗಳನ್ನು ಅಟಲ್ ಜೀ ಜನ ಸ್ನೇಹಿ ಕೇಂದ್ರದಲ್ಲಿ ವಿತರಿಸಲಾಗುವುದು. ನಗರ ಪ್ರದೇಶದ ವ್ಯಾಪ್ತಿಯಲ್ಲಿ ಘಟಿಸುವ ಜನನ ಮರಣ ಘಟನೆಗಳಿಗೆ ಪ್ರಮಾಣ ಪತ್ರಗಳನ್ನು ಆಯಾ ಜನನ ಮರಣ ನೋಂದಣಿ ಕೇಂದ್ರಗಳಲ್ಲಿ ವಿತರಿಸಲಾಗುವುದು.

   ಸಾಂಖ್ಯಿಕ ಮಾಹಿತಿಯ ಆಧಾರದ ಮೇಲೆ ಜನನ ಮರಣ ನೋಂದಣಿ ಅಧಿನಿಯಮ, 1969ರ ಕಾರ್ಯಕ್ಕೆ ಸಂಬಂಧಿಸಿದ ವರದಿಯನ್ನು ಪ್ರತಿ ವರ್ಷವು ತಯಾರಿಸಲಾಗುವುದು.

2. **ಮರಣ ಕಾರಣ ವೈದ್ಯಕೀಯ ಪ್ರಮಾಣ ಪತ್ರ (MCCD)**

   ಜನನ ಮರಣಗಳ ನೋಂದಣಿ ಅಧಿನಿಯಮ, 1969ರ ಅಡಿಯಲ್ಲಿ ಮರಣ ಕಾರಣ ವೈದ್ಯಕೀಯ ಪ್ರಮಾಣ ಪತ್ರ ಯೋಜನೆಯು ಪ್ರಮುಖ ಅಂಕಿ ಅಂಶಗಳ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿದೆ. ಇದು ನಿಯಮಿತವಾಗಿ ನಿರ್ದಿಷ್ಟ ಮರಣದ ಅಂಕಿ ಅಂಶಗಳನ್ನು ಪಡೆಯಲು ವಿಶ್ವಾಸಾರ್ಹ Data base ನ್ನು ಒದಗಿಸುವ ಗುರಿಯನ್ನು ಹೊಂದಿದೆ. ಮರಣ ಕಾರಣ ವೈದ್ಯಕೀಯ ಪ್ರಮಾಣ ಪತ್ರ ಯೋಜನೆಯನ್ನು ರಾಜ್ಯದಲ್ಲಿ 1967ರಲ್ಲಿ ಪರಿಚಯಿಸಲಾಗಿದೆ.

ಮರಣ ಕಾರಣ ವೈದ್ಯಕೀಯ ಪ್ರಮಾಣ ಪತ್ರ ಯೋಜನೆಯಡಿ ಒಳಗೊಂಡಿರುವ ವೈದ್ಯಕೀಯ ಸಂಸ್ಥೆಗಳಿಂದ ವೈದ್ಯರಿಂದ ಪ್ರಮಾಣೀಕರಿಸಿದ ಮರಣ ಕಾರಣ ವೈದ್ಯಕೀಯ ಪ್ರಮಾಣ ಪತ್ರ ನಮೂನೆ–4ನ್ನು ನೇರವಾಗಿ ಮಾಹೆವಾರು ಜನನ ಮರಣ ಮುಖ್ಯ ನೋಂದಣಾಧಿಕಾರಿಗಳ ಕಛೇರಿಗೆ ಕಳುಹಿಸಲಾಗುತ್ತದೆ. ಕಛೇರಿಯಲ್ಲಿ ಮರಣ ಕಾರಣ ವೈದ್ಯಕೀಯ ಪ್ರಮಾಣ ಪತ್ರ ನಮೂನೆ 4ನ್ನು ಪರಿಶೀಲಿಸಿ, ICD-10 ರಂತೆ ಸಂಕೇತಿಕರಣಗೊಳಿಸಲಾಗುವುದು ಹಾಗೂ ಭಾರತ ಮಹಾ ನೋಂದಣಾಧಿಕಾರಿಗಳು ನಿಗದಿಪಡಿಸಿರುವ/ವಿನ್ಯಾಸಗೊಳಿಸಿರುವ ರಾಷ್ಟ್ರೀಯ ಪಟ್ಟಿಯಂತೆ ಕೋಷ್ಠಕ–9ನ್ನು ತಯಾರಿಸಲಾಗುವುದು.

## II. ರಾಷ್ಟ್ರೀಯ ಮಾದರಿ ಸಮೀಕ್ಷೆ: (NSS)

1. ರಾಷ್ಟ್ರೀಯ ಮಾದರಿ ಸಮೀಕ್ಷೆ ಕಛೇರಿಯವರ (NSSO) ಸಹಯೋಗದಿಂದ ರಾಷ್ಟ್ರೀಯ ಮಾದರಿ ಸಮೀಕ್ಷೆಯನ್ನು 18ನೇ ಸುತ್ತಿನಿಂದ (1963–64) ಕರ್ನಾಟಕ ರಾಜ್ಯವು ಪ್ರಾರಂಭಿಸಿದೆ.
2. ಪ್ರತಿ ಸುತ್ತಿನಲ್ಲಿ ಒಳಗೊಂಡಿರುವ ಮಾದರಿಗಳನ್ನು ಸಮಪಾಲು ಆಧಾರದ ಮೇಲೆ ಸಮೀಕ್ಷೆಯನ್ನು ನಡೆಸಲಾಗುತ್ತದೆ.
3. 77ನೇ ಸುತ್ತಿನ ರಾಷ್ಟ್ರೀಯ ಮಾದರಿ ಸಮೀಕ್ಷೆ ಕ್ಷೇತ್ರ ಕಾರ್ಯವು ಪ್ರಗತಿಯಲ್ಲಿದೆ. (ಸಮೀಕ್ಷೆಯ ಅವಧಿ ಜನವರಿ 2019 ರಿಂದ ಡಿಸೆಂಬರ್ 2019ರ ವರೆಗೆ)
4. 66ನೇ ಸುತ್ತಿನಿಂದ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ಕೇಂದ್ರ ಮತ್ತು ರಾಜ್ಯದ Unit level data ವನ್ನು ಒಗ್ಗೂಡಿಸುತ್ತಿದ್ದು, ಜಿಲ್ಲಾ ಮಟ್ಟದ ಅಂದಾಜನ್ನು ಹೊರ ತಂದಿದೆ.
5. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು 66, 67, 68, 69 ಮತ್ತು 71ನೇ ಸುತ್ತುಗಳ Pooled data ವರದಿಯನ್ನು ಪ್ರಕಟಿಸಿರುತ್ತದೆ.

## III. ರಾಜ್ಯ ಸರ್ಕಾರಿ ಸೇವೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಪ್ರಾತಿನಿಧ್ಯತೆ:

ಸರ್ಕಾರಿ ಆದೇಶ ಸಂ. DPAR 11 SBC 89 ಬೆಂಗಳೂರು, ದಿನಾಂಕ: 06.05.1989 ರಂತೆ ದಿನಾಂಕ 31ನೇ ಮಾರ್ಚ್‌ರಲ್ಲಿರುವಂತೆ ರಾಜ್ಯದ ಎಲ್ಲ ಸರ್ಕಾರಿ ಇಲಾಖೆಗಳಿಂದ ರಾಜ್ಯ ಸರ್ಕಾರಿ ಸೇವೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಪ್ರಾತಿನಿಧ್ಯತೆ ಬಗ್ಗೆ ಸಾಂಖ್ಯಿಕ ಮಾಹಿತಿಯನ್ನು ಪ್ರತಿ ವರ್ಷವು ಸಂಗ್ರಹಿಸಲಾಗುತ್ತಿದೆ. ಸಂಗ್ರಹಿಸಿದ ಮಾಹಿತಿಯ ಆಧಾರದ ಮೇಲೆ ರಾಜ್ಯ ಸರ್ಕಾರಿ ಸೇವೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಪ್ರಾತಿನಿಧ್ಯತೆ ಬಗ್ಗೆ ವಾರ್ಷಿಕ ವರದಿಯನ್ನು ತಯಾರಿಸಲಾಗುತ್ತಿದೆ.